ಉಪಾಧ್ಯಕ್ಷರು: ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಸದಸ್ಯರಾಗಿದ್ದೀರಿ. ನೀವೆಲ್ಲರೂ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಒಪ್ಪಿಗೆ ಕೊಟ್ಟಿರುವುದರಿಂದ ಇವತ್ತು ಮಂಡನೆ ಮಾಡುತ್ತಿದ್ದಾರೆ. ಆದ್ದರಿಂದ ಮಂಡನೆ ಮಾಡುವುದಕ್ಕೆ ಸಹಕಾರ ಕೊಡಬೇಕು.

ಶ್ರೀ ಜೆ.ಎಚ್.ಪಟೇಲ್ (ಮುಖ್ಯಮಂತ್ರಿಗಳು): ರೈತರ ಹಿತದೃಷ್ಟಿಯಿಂದ ಮತ್ತು ಆಲ್ಲಿರತಕ್ಕಂಥ ಕಾರ್ಮಿಕರ ವೇತನದ ಬಾಕಿಯನ್ನು ಆದಷ್ಟು ಬೇಗ ಕೊಡಬೇಕೆಂಬ ದೃಷ್ಟಿಯಿಂದ ದೇವಿ ಸಕ್ಕರೆ ಬಗ್ಗೆ ಈ ವಿಧೇಯಕ ಬಹಳ ಅವಶ್ಯಕತೆ ಇದೆ ಎಂದು ಎಲ್ಲಾ ಪಕ್ಷದ ಮುಖಂಡರು ಒಪ್ಪಿದ್ದರಿಂದ ಇದನ್ನು ವಿಧಾನ ಪರಿಷತ್ತಿನಲ್ಲಿ ಪಾಸ್‌ಮಾಡಲಾಗಿದೆ. ಆದರೆ, ಆ ದಿನದ ಸಭೆಗೆ ಮಾನ್ಯ ಶ್ರೀರಾಮರೆಡ್ಡಿಯವರನ್ನು ಕರೆದಿರಲಿಲ್ಲ. ಇವತ್ತು ಇಲ್ಲಿ ಒಪ್ಪಿಗೆ ಆದರೆ, ಅದಕ್ಕೆ ರಿಲೀಫ್ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬ ಒಂದೇ ಕಾರಣಕೋಸ್ಕರ ಈ ಬಿಲ್‌ನ್ನು ಬೇಗ ತರಲಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬಿಲ್ ಪಾಸ್ ಮಾಡಿದ ಮೇಲೆ, ನಮಗೆಲ್ಲಾ ಈಗ ಬಿಲ್ ಸಪ್ಲೈ ಮಾಡುತ್ತಿದ್ದೀರೆಂದು ಕೇಳುತ್ತಿದ್ದೇನೆ.

ಶ್ರೀ ಜೆ.ಎಚ್.ಪಟೇಲ್: ನಿಮ್ಮ ಮೇಲೆ ಅಷ್ಟೊಂದು ವಿಶ್ವಾಸ ಇದೆ.

ಶ್ರೀ ವಾಟಾಳ್ ನಾಗರಾಜ್: ನಾವು ಇದನ್ನು ಎಕ್ಸ್-ರೇ ರೀತಿಯಲ್ಲಿ ನೋಡಬೇಕಾಗುತ್ತದೆ. ಇವತ್ತು ಒಂದು ಕಂತೆ ಬಿಲ್‌ಗಳನ್ನು ಕೊಟ್ಟಿದ್ದೀರಿ, ಇದನ್ನು ಯಾವಾಗ ಓದುವುದು? ತಾವು ತರಾತುರಿಯಲ್ಲಿ ಮಂಡಿಸುತ್ತಿದ್ದೀರಿ. ತಾವು ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು. ತಾವು ಆಯಿತು ಎಂದರೆ ನಾವು ಕುಳಿತುಕೊಳ್ಳುತ್ತೇವೆ. ನಮ್ಮದೇನೂ ಅಭ್ಯಂತರ ಇಲ್ಲ. ಬೇಕಾದರೆ 1 ರಿಂದ 15 ವಿಧೇಯಕಗಳನ್ನು ಒಟ್ಟಿಗೆ ಮತಕ್ಕೆ ಹಾಕಿ, ನೀವು ಹೌದು ಎಂದು ಹೇಳಿ, ನಾವು ಇಲ್ಲವೆಂದು ಹೇಳುತ್ತೇವೆ.

2. ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ "1998ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಒಂದು ಆಧ್ಯಾದ್ಯಾಪನವನ್ನು ಈಗ ಹೊರಡಿಸಿದ್ದೇವೆ. ಇದರಲ್ಲಿ ಕ್ಷೇತ್ರ ಪುನರ್ ಏಂಗಡನೆ ಮಾಡತಕ್ಕಂಥದ್ದು ಮತ್ತು ಅದರ ಮೀಸಲಾತಿ ಹಾಗೂ ಮತದಾನದ ಪಟ್ಟಿಯನ್ನು ವಿಭಜಿಸಿಕೊಡತಕ್ಕಂಥ ಜವಾಬ್ದಾರಿಯನ್ನು ಚುನಾವಣಾ ಆಯುಕ್ತರಿಗೆ ಕೊಟ್ಟಿದೆ. ಚುನಾವಣಾ ಆಯೋಗದವರಿಗೆ ತನ್ನದೇ ಆದಂತಹ ಸಿಬ್ಬಂದಿಗಳು ಇಲ್ಲದೇ ಇರುವುದರಿಂದ ನಮ್ಮ ಜಿಲ್ಲಾಧಿಕಾರಿಗಳು ಮತ್ತು ತತ್ಸಂಬಂಧಿಯಾದಂತಹ ಅಧಿಕಾರಿಗಳ ಜೊತೆಗೆ ಈಗ ಕಾರ್ಯ ನಿರ್ವಹಿಸುವುದಕ್ಕೆ ಈ ವಿಧೇಯಕ ಸೆಕ್ಷನ್ 5ಕ್ಕೆ ಕೆಲವು ತಿದ್ದುಪಡಿಯನ್ನು ತಂದು ಸಾಮಾನ್ಯ ಹಾಗೂ ವಿಶೇಷ ಸಂದರ್ಭಗಳ ಚುನಾವಣಾ ಆಯುಕ್ತರ ನೇರವಾದಂತಹ ಹತೋಟಿ ಮತ್ತು ಅವರ ಉಸ್ತುವಾರಿಯಲ್ಲಿ ಜಿಲ್ಲಾಧಿಕಾರಿಗಳು ಈ ಕ್ರಮವನ್ನು ಕೈಗೊಳ್ಳಬೇಕೆಂದು ತಂದಿರತಕ್ಕಂಥ ಈ ಆಧ್ಯಾದ್ಯಾಪನವನ್ನು ಈಗ ಮರುಕಳಿಸಿ ಕೊಡತಕ್ಕಂಥದ್ದು. ಎರಡನೆಯದು, 196 ಸೆಕ್ಷನ್ (1)ರ ಕೆಳಗೆ ನಾವು ತಂದಿರತಕ್ಕಂಥ ತಿದ್ದುಪಡಿ ಏನೆಂದರೆ, ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ, ಜಿಲ್ಲಾಧಿಕಾರಿಗಳ ಸ್ಥಾನಕ್ಕೆ ಕಡಿಮೆ ಇಲ್ಲದಂತಹ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹಾಕಬೇಕೆಂದು ನಿಯಮ ಇದೆ. ಈಗ ಹೊಸ ಜಿಲ್ಲೆಗಳನ್ನು ಮಾಡಿರುವುದರಿಂದ ಮತ್ತು ಐಎಎಸ್ ಅಧಿಕಾರಿಗಳಿಗಿಂತ ಉತ್ತಮವಾಗಿರತಕ್ಕಂಥ ಸಮರ್ಥ ಕೆಎಎಸ್ ಅಧಿಕಾರಿಗಳು ನಮ್ಮಲ್ಲಿಯೇ ಇದ್ದಾರೆ ಮತ್ತು ಅಭಿವೃದ್ಧಿ ಇಲಾಖೆಯಲ್ಲಿ ಕೂಡ ಉನ್ನತವಾಗಿ ಪ್ರಗತಿ ಪಡೆದಿರತಕ್ಕಂಥವರು ಹಾಗೂ ಅನುಭವ ಇರತಕ್ಕಂಥವರು ಇರುತ್ತಾರೆಂಬ ಕಾರಣಕ್ಕಾಗಿ ಮತ್ತು ಈಗ ಪ್ರಾಯೋಗಿಕವಾಗಿ ಮೂರು ವರ್ಷಗಳ ಕಾಲ ಅವರನ್ನು ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಗಳನ್ನಾಗಿ ನೇಮಕಾತಿ ಮಾಡಲು ಕೂಡ ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ. ವಿಧಾನಪರಿಷತ್ತಿನಲ್ಲಿ ಇದಕ್ಕೆ ಒಪ್ಪಿಗೆ ಆಗಿದೆ. ಆದ್ದರಿಂದ ಇವತ್ತು ದಯವಿಟ್ಟು ಸರಳವಾದಂತಹ ತಿದ್ದುಪಡಿಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀಮತಿ ಬಿ.ಟಿ.ಲಲಿತನಾಯಕ್ (ದೇವದುರ್ಗ): ಅದರಲ್ಲಿ ಶಾಸಕರು ಸದಸ್ಯರಾಗಿರುವಂತೆ ಮಾಡಿದರೆ ಚೆನ್ನಾಗಿರುತ್ತದೆ.

ಶ್ರೀ ಮಲ್ಲಿಕಾರ್ಜುನಖರ್ಗೆ (ವಿರೋಧಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಸುಲಭವಾಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ತಂದಂಥ ಅಮೆಂಡ್‌ಮೆಂಟ್ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ, ಅಮೆಂಡ್‌ಮೆಂಟ್‌ನಲ್ಲಿ ಆಗಿರತಕ್ಕಂಥ ಕೆಲವು ನ್ಯೂನತೆಗಳ ಬಗ್ಗೆ ಒಂದರೆಡು ಮಾತುಗಳನ್ನು ಹೇಳುತ್ತೇನೆ. "To restore the powers of Deputy Commissioner so that he shall execise the powers of notifying number of elected members, delimitation of Constituencies and publication of names of

elected members subject to the general and special orders of the State Election Commission; and to empower the Tahsidlar to prepare the voters list for Grama Panchayat and Taluk Panchayat by splitting the electoral rolls of Zilla Panchayat Constituencies." ಇದು ಅಲ್ಲದೆ ತಾಲ್ಲೂಕು ಮತ್ತು ಗ್ರಾಮಪಂಚಾಯತಿಯ ಡಿ-ಲಿಮಿಟೇಷನ್ಸ್ ಮತ್ತು ಜೊತೆಯಲ್ಲಿ ಇನ್-ಟೋಟೊ ಎಲೆಕ್ಷನ್ ಕಮಿಷನ್‌ರವರು ಒಂದು ಜಿಲ್ಲೆಯಲ್ಲಿ ಮೀಸಲಾತಿ ಮತ್ತು ಜನರಲ್ ಹಾಗೂ ಗ್ರೂಪ್ ಎ,ಬಿ ಎಷ್ಟು ಇರಬೇಕೆಂಬ ಒಂದು ಟೋಟಲ್ ಸಂಖ್ಯೆಯನ್ನು ಕೊಡುತ್ತಾರೆ. ಕೊನೆಗೆ ಜಿಲ್ಲಾಧಿಕಾರಿಗಳು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ತಾಲ್ಲೂಕು ಪಂಚಾಯತಿಯ ಜಾಗವನ್ನು ಜಿಲ್ಲಾಧಿಕಾರಿಗಳು ಫಿಕ್ಸ್ ಮಾಡುತ್ತಾರೆ. ಆಗ ಏನಾಗುತ್ತದೆಂದು ತಮಗೆಲ್ಲಾ ಗೊತ್ತಿರತಕ್ಕಂಥ ವಿಷಯ. ಇದನ್ನು ಯಾರೂ ತಪ್ಪ ಭಾವಿಸಬಾರದು. ಅನೇಕ ಸಾರಿ ಈ ಅಧಿಕಾರ 100ಕ್ಕೆ 100ರಷ್ಟು ಮಿಸ್‌ಯೂಸ್ ಆಗತಕ್ಕಂಥ ಸಾಧ್ಯತೆ ಇರುತ್ತದೆ. ಆದ್ದರಿಂದ ಸ್ಟೇಟ್ ಎಲೆಕ್ಷನ್ ಕಮಿಷನರ್ ಹತ್ತಿರ ಈ ಅಧಿಕಾರ ಇದ್ದರೆ ಯಾರೂ ಕೂಡ ಅಲ್ಲಿ ಹೋಗಿ ಪದೇಪದೇ ಕೈ ಹಾಕುವುದಕ್ಕೆ ಆಗುವುದಿಲ್ಲ ಮತ್ತು ಇಂಟರ್‌ಫಿಯರ್ ಮಾಡುವುದಕ್ಕೂ ಸಹ ಆಗುವುದಿಲ್ಲ. ಇದನ್ನು ಜಿಲ್ಲಾಧಿಕಾರಿಯವರಿಗೆ ವಹಿಸಿದರೆ, ಜಿಲ್ಲಾಧಿಕಾರಿಗಳ ಮೇಲೆ ಸರ್ಕಾರದವರು ಪ್ರಭಾವ ಬೀರಿ ತಮಗೆ ಯಾವುದನ್ನು ಜನರಲ್ ಮಾಡಬೇಕು ಯಾವುದನ್ನು ಮೀಸಲಾತಿ ಮಾಡಬೇಕೆಂದು ಮತ್ತು ಯಾವುದನ್ನು ಯಾವ ಗ್ರೂಪ್‌ಗೆ ಸೇರಿಸಬೇಕೆಂದು ಅಲ್ಲಿ ತಾಲ್ಲೂಕು ಪಂಚಾಯತ್ ಬಲಾಬಲದ ಅಂಕಿಸಂಖ್ಯೆಗಳನ್ನು ನೋಡಿ ತಮಗೆ ಬೇಕಾದುದನ್ನು ಜನರಲ್ ಮಾಡುವುದು ಅಥವಾ ಮೀಸಲಾತಿ ಮಾಡುವುದನ್ನು ಮಾಡುತ್ತಾರೆ. ಕೆಲವು ಕಡೆ ಮೀಸಲಾತಿ ಇದ್ದರೆ ಅದನ್ನು ಬೇಕೆಂದೇ ಜನರಲ್ ಮಾಡುವುದು, ಈ ರೀತಿಯ ವ್ಯತ್ಯಾಸ ಆಗುತ್ತದೆ. ಮೊನ್ನೆ ನಡೆದ ಮುನಿಸಿಪಾಲಿಟಿಯ ಚುನಾವಣೆಯಲ್ಲಿ ಈಗಾಗಲೇ ನಾವೆಲ್ಲಾ ನೋಡಿದ್ದೇವೆ. ನೀವು ನಿಷ್ಪಕ್ಷಪಾತವಾಗಿ ಇದರಲ್ಲಿ ನಡೆದುಕೊಂಡಿದ್ದೇವೆಂದು ನಿಮ್ಮ ಎದೆಯ ಮೇಲೆ ಕೈ ಇಟ್ಟುಕೊಂಡು ಹೇಳಿದರೆ, ತಾವು ಏನು ಹೇಳುತ್ತೀರೋ ಆ ರೀತಿ ನಾನು ಕೇಳುತ್ತೇನೆ. ಅದರಲ್ಲಿಯೂ ಕೂಡ ಅನೇಕರು ಇಂಟರ್‌ಫಿಯರ್ ಆಗಿದ್ದಾರೆ ಮತ್ತು ಕೆಲವು ಶಾಸಕರು ಮುನಿಸಿಕೊಂಡಿದ್ದರಿಂದ ಅವರು ಕೇಳಿದ ಹಾಗೆಲ್ಲಾ ಮಾಡಿ ಕೊಟ್ಟಿದ್ದೀರಿ. ಮುಂದೆಯೂ ಕೂಡ ಈ ಒತ್ತಡ ಮುಖ್ಯಮಂತ್ರಿಗಳ ಮೇಲೆ ಬರುತ್ತದೆ. ನೀವು ಎಷ್ಟೇ ಇಲ್ಲ ಎಂದು ಹೇಳಿದರೂ ಕೂಡ ಶಾಸಕರ ಒತ್ತಾಯಕ್ಕೆ ಅವರು ಏನು ಹೇಳುತ್ತಾರೋ ಹಾಗೆ ಅವರ ತಾಲ್ಲೂಕುಗಳಲ್ಲಿ ಅಡ್ಜಸ್ಟ್ ಮಾಡಬೇಕಾಗುತ್ತದೆ. ಕೆಲವು ಸಮಯದಲ್ಲಿ ಎಲ್ಲರೂ ಹೇಳುವುದನ್ನು ಮಾಡುವುದಕ್ಕೆ ಆಗುವುದಿಲ್ಲ. ಶಾಸಕರು ಏನೇನು ಹೇಳುತ್ತಾರೋ ಅವರ ಇಚ್ಛೆ ಪ್ರಕಾರ ನಡೆದುಕೊಂಡು ಹೋಗಬೇಕಾಗುತ್ತದೆಯೇ ಹೊರತಾಗಿ ನ್ಯಾಯವಾಗಿ ಯಾವ್ಯಾವ ವರ್ಗಗಳಿಗೆ ರೊಟೇಷನ್ ಪ್ರಕಾರ ಎಲ್ಲಿ

ಸಿಗಬೇಕೋ ಆ ರೀತಿ ಸಿಗುವುದಿಲ್ಲ. ಕೆಲವು ಕಡೆ ಮೀಸಲಾತಿ ಸಿಗಬಹುದು, ಇಲ್ಲ ಎಂದು ಹೇಳುವುದಿಲ್ಲ. ಆದರೆ, ಎಲ್ಲಿಯಾದರು ಕೆಲವರಿಂದ ತೊಂದರೆ ಆಗುತ್ತಿದ್ದರೆ ಅಂಥವರನ್ನು ತೆಗೆಯಬೇಕೆಂದು ಮನಸ್ಸು ಮಾಡಿದರೆ ಖಂಡಿತವಾಗಿ ಜಿಲ್ಲಾಧಿಕಾರಿಗಳ ಮೇಲೆ ಇನ್‌ಫ್ಲುಯನ್ಸ್ ಹಾಕಿ ಬದಲಾವಣೆ ಮಾಡತಕ್ಕಂಥದ್ದು ಸಾಧ್ಯತೆ ಇದೆ. ಇಂಥ ಎಕ್ಸ್‌ಪೆರಿಮೆಂಟ್ಸಗಳು ಆಗಿದೆ, ಮುಂದೂ ಕೂಡ ಆಗುತ್ತದೆ ಮತ್ತು ಇದರಿಂದ ಗ್ರಾಮ ಮತ್ತು ತಾಲ್ಲೂಕು ಪಂಚಾಯತಿಗೆ ತೊಂದರೆಯಾಗುತ್ತದೆ.

7.00 ಪಿಎಂ

ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಅಧಿಕಾರ ಹಿಂದೆ ಏನಿತ್ತು ಸ್ಟೇಟ್ ಕಮೀಷನರ್‌ರವರಿಗೆ ಕೊಟ್ಟಿದ್ದೀರಿ, ಅದು ಅಲ್ಲಿಯೇ ಇರಲಿ. ಚುನಾವಣೆಯ ಅಧಿಕಾರಿಗಳು ಹಾಗೂ ರಾಜ್ಯದ ಅಧಿಕಾರಿಗಳು ಏನು ಹೇಳುತ್ತಾರೆ ಅದರಲ್ಲಿ ಹೆಚ್ಚು ಕಡಿಮೆ ಯಾರು ಇಂಟರ್‌ಫಿಯರ್ ಮಾಡುವುದಿಲ್ಲ. ಚುನಾವಣೆಯ ಕೆಲಸಗಳನ್ನು ಆ ಅಧಿಕಾರಿಗಳು ಮಾಡಿಕೊಳ್ಳುತ್ತಾರೆ. ನಾವು ಅಡ್ಮಿನಿಸ್ಟ್ರೇಟೀವ್ ಪವರ್‌ನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟರೆ ಅನೇಕ ಜನ ನಿಮ್ಮ ಮೇಲೆ ಒತ್ತಡವನ್ನು ತರುತ್ತಾರೆ. ಅವರ ಮಾತನ್ನು ಜಿಲ್ಲಾಧಿಕಾರಿಗಳು ಕೇಳದಿದ್ದರೆ ಅವರನ್ನು ವರ್ಗಾವಣೆ ಮಾಡಿಸುತ್ತಾರೆ. ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಿ ಎಂದು ನಿಮ್ಮ ಮೇಲೆ ಒತ್ತಡ ಬೀರುವಾಗ ಇಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿ ಯಾರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಜನರಲ್ ಎಲ್ಲಿ ಮಾಡಬೇಕು, 'ಎ' 'ಬಿ' ಮತ್ತು 'ಸಿ' ಗ್ರೂಪ್ ಯಾವುದು ಎಂದು ಒತ್ತಡವನ್ನು ತರುವುದು ಸಹಜ. ಒಟ್ಟು ಸಂಖ್ಯೆಗಳನ್ನು ಅವರು ಕೊಡುತ್ತಾರೆ. ಈಗ ಗುಲ್ಬರ್ಗ ಜಿಲ್ಲೆಯಲ್ಲಿ 10 ತಾಲ್ಲೂಕುಗಳಿವೆ. ಅವರು ಒಟ್ಟಾಗಿ 100 ಎಸ್.ಸಿ.ಗಳಿಗೆ ರಿಸರ್ವ್ ಮಾಡಿ, 2-(ಎ) ಗ್ರೂಪ್‌ಗೆ ಮಾಡಿ, 1-(ಬಿ) ಗ್ರೂಪ್ ಮಾಡಿ, 4 ಜನರಲ್‌ಗೆ ಮಾಡಿ ಹೀಗೆ ಅವರು ಅಂಕಿಸಂಖ್ಯೆಗಳನ್ನು ಕೊಡುತ್ತಾರೆ. ಮುಂಚೆ ಅದು ಇವರ ವಿವೇಚನೆಗೆ ಬಿಟ್ಟಿದ್ದು. ಅದು ಯಾದಗಿರ್ ತಾಲ್ಲೂಕು ಮಾಡಬೇಕೋ, ಶಹಪುರ್ ರಿಸರ್ವ್ ಮಾಡಬೇಕೋ, ಅಫಜಲ್‌ಪುರ ಮಾಡಬೇಕೋ ಈ ಡಿಸ್‌ಕ್ರಿಷನ್ ನಮ್ಮ ಜಿಲ್ಲಾಧಿಕಾರಿಗಳಿಗೆ ಇರುತ್ತದೆ. ಅದನ್ನು ಗ್ರಾಮಪಂಚಾಯತಿಗೆ ತಂದರೆ ಅದು ತಹಶೀಲ್ದಾರ್‌ರವರಿಗೆ ಇರುತ್ತದೆ. ನಿಮಗೆ ಗೊತ್ತಿರುವ ಹಾಗೆ ಯಾರು ಪ್ರಭಾವಶಾಲಿ ಶಾಸಕರುಗಳು ಇರುತ್ತಾರೋ ಅವರು ನಿಮ್ಮ ಮೇಲೆ ಒತ್ತಡವನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಮ್ಮ ಕಡೆ ಷೆಡ್ಯೂಲ್‌ಕಾಸ್ಟ್ ಬೇಡ, ಜನರಲ್ ಕೊಡಿ ಎಂದು ಕೇಳುತ್ತಾರೆ. ಇಲ್ಲಾ ಹೋದ ಸಾರಿ ಜನರಲ್ ಇತ್ತಲ್ಲಾ, ಈ ಸಾರಿ ಜನರಲ್ ಬರುವುದಿಲ್ಲ ಎಂದು ಹೇಳಿದರೆ, ಇಲ್ಲ ಬ್ಯಾಕ್‌ವರ್ಡ್ ಬರಬೇಕಲ್ಲಾ ಎಂದು ಹೇಳಿದರೆ ಅವರು ಇಲ್ಲ ನಮಗೆ ಹಾಗೆ ಮಾಡಿಕೊಡಿ ಎಂದು ಹೇಳುತ್ತಾರೆ. ನಿಮ್ಮ ಮೇಲೆ ಒತ್ತಡ ಬರುತ್ತದೆ, ನಿಷ್ಪಕ್ಷಪಾತವಾಗಿ ಈ ಚುನಾವಣೆಯು ನಡೆಯುವುದಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ನಿಮಗೆ

ಪ್ರಾಮಾಣಿಕವಾಗಿ ಚುನಾವಣೆಯು ನಡೆಯಬೇಕೆಂದರೆ ಈಗ ಏನು ಇದೆ ಅದನ್ನು ಎಲೆಕ್ಷನ್ ಕಮೀಷನರ್‌ಗೆ ಕೊಟ್ಟು ಅದನ್ನೇ ಮುಂದುವರಿಸಿಕೊಂಡು ಚುನಾವಣೆಯನ್ನು ಮಾಡಬೇಕು. ಅವರು ಈಗಾಗಲೇ ಮಾಡಿದ್ದಾರೆ. ಪುನಃ ನಾವು ಈ ವಿಷಯದ ಬಗ್ಗೆ ಕೈಹಾಕುವುದು ಸರಿಯಿಲ್ಲ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಆತಂಕಗಳನ್ನು ವ್ಯಕ್ತಮಾಡಿದ್ದಾರೆ. ಇವತ್ತು ರಾಜಕಾರಣದಲ್ಲಿ ಇಂತಹ ಆತಂಕಗಳಿಗೆ ಸಹಜವಾದಂತಹ ನಂಬಿಕೆಯೂ ಕೂಡ ಇದೆ. ಆದರೆ ನಾವು ಇಡೀ ಚುನಾವಣೆಯ ಆಯೋಗಕ್ಕೆ ನಮ್ಮ ಇಡೀ ಮೀಸಲಾತಿಯ ಉಪಕ್ರಮಗಳನ್ನು ವಹಿಸಿಕೊಟ್ಟಿರುವಂಥದ್ದು ನಮ್ಮ ಪ್ರಾಮಾಣಿಕವಾದ ನಿರ್ಧಾರ. ನಮಗೆ ರಾಜಕೀಯ ಹಸ್ತಕ್ಷೇಪ ಸರ್ಕಾರದ ವತಿಯಿಂದ ಆಗಬಾರದು ಎಂಬ ಕಾರಣಕ್ಕಾಗಿಯೇ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ತಾವು ಕರ್ನಾಟಕ ರಾಜ್ ಪಂಚಾಯಿತಿ 1993ರಲ್ಲಿ ತಂದಾಗ ಇಡೀ ನಿಮ್ಮ ಸರ್ಕಾರದ ಅಧಿಕಾರವೇ ಅದರಲ್ಲಿ ಇತ್ತು. ಆದರೆ ಆ ಸರ್ಕಾರದ ಅಧಿಕಾರವನ್ನು ಚುನಾವಣೆಯ ಆಯೋಗಕ್ಕೆ ವಹಿಸಿಕೊಟ್ಟಿದ್ದರ ಕಾರಣ ನಮ್ಮ ಪ್ರಾಮಾಣಿಕತೆ. ನಾವು ಅದರಲ್ಲಿ ಹಸ್ತಕ್ಷೇಪವನ್ನು ಮಾಡುವುದು ಬೇಡ ಎಂದು ಹೇಳಿದೆವು. ಆದರೆ ಚುನಾವಣೆಯ ಆಯೋಗವೇ ನಮಗೆ ಒಂದು ಪತ್ರವನ್ನು ಬರೆದಿದೆ. 85 ಸಾವಿರ ಗ್ರಾಮಪಂಚಾಯಿತಿಯ ಸದಸ್ಯರ ಮೀಸಲಾತಿ ಅದರ ಕ್ಷೇತ್ರವ್ಯಾಪ್ತಿಯನ್ನು ಪುನರ್‌ವಿಂಗಡಣೆಯ ಜವಾಬ್ದಾರಿಯನ್ನು ಮಾಡಲಿಕ್ಕೆ ನಮ್ಮಲ್ಲಿ ಸಿಬ್ಬಂದಿ ಇಲ್ಲ. ಆದ್ದರಿಂದ ಈ ಕಾರ್ಯವನ್ನು ಜಿಲ್ಲಾಧಿಕಾರಿಗಳಿಗೂ ಹಾಗೂ ತಹಶೀಲ್ದಾರ್‌ವರಿಗೆ ವಹಿಸಿಕೊಡಬೇಕೆಂದು ಪತ್ರ ಬರೆದಿದ್ದಾರೆ. ನಾವು ಆ ಕೆಲಸವನ್ನು ಮಾಡಿದ್ದೇವೆ. ಗ್ರಾಮಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಎಷ್ಟು ಮೀಸಲಾತಿ ಇರುತ್ತದೆಂಬುದರ ಬಗ್ಗೆ ನಮ್ಮ ಇಲಾಖೆಯವರು ಒಂದು ರಾಜ್ಯಪತ್ರವನ್ನು ಹೊರಡಿಸಿದ್ದಾರೆ. ಅದರಲ್ಲಿ ಗುಲ್ಬರ್ಗಾ ತಾಲ್ಲೂಕಿನಲ್ಲಿ ತಾವು ಹೇಳಿದಂತೆ ಇಷ್ಟು ಕ್ಷೇತ್ರದಲ್ಲಿ ಇಷ್ಟು ಮೀಸಲಾತಿ ಬರುತ್ತದೆ. ಹಿಂದುಳಿದ ಜನಾಂಗಕ್ಕೆ ಇಷ್ಟು ಮೀಸಲಾಗಿ ಅದರಲ್ಲಿ ಮಹಿಳೆಯರು ಇಷ್ಟು, ಪರಿಶಿಷ್ಟ ಜಾತಿಗೆ ಇಷ್ಟು ಮೀಸಲಾಗಿ ಅದರಲ್ಲಿ ಮಹಿಳೆಯರಿಗೆ ಇಷ್ಟು ಎಂದು ನಾವು ಈ ರೀತಿಯಾಗಿ ಪ್ರಕಟಣೆಯನ್ನು ಮಾಡಿದ ಮೇಲೆ ಈಗಾಗಲೇ ಚುನಾವಣೆಯ ಆಯೋಗದವರು ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾಪಂಚಾಯಿತಿಯ ಬಗ್ಗೆ ರಾಜ್ಯ ಪತ್ರದಲ್ಲಿ ಪ್ರಕಟಣೆಯನ್ನು ಮಾಡಿದ್ದಾರೆ. ನಮ್ಮ ಅನೇಕ ಶಾಸಕರುಗಳಿಗೆ ಅದು ಆಗಿರುವುದು ಗೊತ್ತಿರುವುದಿಲ್ಲ. ನಾವು ಅವಿಶ್ವಾಸ ಗೊತ್ತುವಳಿಯ ಮೇಲೆ ಚರ್ಚೆ ಮಾಡುವಾಗ ಚುನಾವಣೆಯ ಆಯೋಗದವರೇ ಸ್ವತಂತ್ರವಾಗಿ ನಿರ್ಧಾರ ಮಾಡಿದ್ದಾರೆ. ಈಗಾಗಲೇ ಇಂತಿಥ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಇಂತಹ ಮೀಸಲಾತಿಯೂ ಇರಬೇಕೆಂದು ಈಗಾಗಲೇ ಪ್ರಕಟಣೆಯನ್ನು ಮಾಡಿದ್ದಾರೆ. ಇದರಲ್ಲಿ ಹಸ್ತಕ್ಷೇಪ ಮಾಡುವ ಪ್ರಶ್ನೆಯೇ

ಬರುವುದಿಲ್ಲ. ನಾಳೇ ನಾಡಿದ್ದರಲ್ಲಿ ತಾಲ್ಲೂಕು ಪಂಚಾಯಿತಿಯ ಪ್ರಕ್ರಿಯೆಗಳೂ ಕೂಡ ಪ್ರಕಟಣೆಯಾಗುತ್ತದೆ. ಇನ್ನು ಗ್ರಾಮಪಂಚಾಯಿತಿಯ ವಿಚಾರದಲ್ಲಿ... ಚುನಾವಣೆಯ ಆಯೋಗದವರೇ ಮಾಡುತ್ತಾರೆ. ಈಗ ಚುನಾವಣೆಯ ಆಯೋಗದವರೇ ಮಾಡುತ್ತಾರೆ. 175 ತಾಲ್ಲೂಕುಗಳ ನಿರ್ಧಾರವನ್ನು ಸಹ ಚುನಾವಣಾ ಆಯೋಗದವರೇ ಮಾಡುತ್ತಾರೆ. Our RDPR department has given the list of names of so many seats, out of which so many seats are reserved for backward classes and scheduled castes. Out of this general, scheduled castes and backward classes, so many seats will be reserved for women. ನಾವು ಕಳುಹಿಸಿಕೊಟ್ಟಿದ್ದೇವೆ. ಆದರೆ ಅದನ್ನು ಚುನಾವಣೆಯ ಆಯೋಗದವರೇ ಮಾಡುತ್ತಾರೆ. ಅವರ ಪತ್ರದ ಮೇಲೆ ನಾವು ಈ ಅಮೆಂಡ್‌ಮೆಂಟ್‌ನ್ನು ತಂದಿದ್ದೇವೆ ಇದರಲ್ಲಿ ಬೇರೆ ಏನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೇ, They have not mentioned the places.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ನಾನು ತಮಗೆ ರಾಜ್ಯ ಪತ್ರದ ಪರಿಪತ್ರವನ್ನು ತಮಗೆ ಕೊಡಲೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಜಿಲ್ಲಾ ಪಂಚಾಯತ್‌ನ ಬಗ್ಗೆ ಕೊಡಬಹುದು ಆದರೆ ತಾಲ್ಲೂಕು ಪಂಚಾಯಿತಿಯ ಬಗ್ಗೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಈಗ ಜಿಲ್ಲಾಪಂಚಾಯಿತಿದು ಆಗಿದೆ. ತಾಲ್ಲೂಕು ಪಂಚಾಯಿತಿಯ ಬಗ್ಗೆ ಚುನಾವಣೆಯ ಆಯೋಗದವರು ಇಷ್ಟರಲ್ಲೇ ಪ್ರಕಟಣೆಯನ್ನು ಮಾಡುತ್ತಾರೆ. ಈಗ ತಾವು ಹೇಳಿದಂತೆ ಯಾದಗಿರ್‌ಗೆ ಯಾವ ನಿರ್ಣಯವಾಗಬೇಕೆಂಬುದು ಚುನಾವಣೆಯ ಆಯುಕ್ತರಿಗೆ ಬಿಟ್ಟಿದ್ದು. ಅದು ರಾಜ್ಯ ಸರ್ಕಾರಕ್ಕೆ ಬಿಟ್ಟಿದ್ದಲ್ಲ. ಅದನ್ನು ಅವರೇ ಮಾಡುತ್ತಾರೆ. ಈಗ ಕೇಂದ್ರ ಸರ್ಕಾರ ಚುನಾವಣೆಗಳನ್ನು ನಡೆಸುತ್ತದೆ. ಅವರೂ ಕೂಡ ಈ ಸಿಬ್ಬಂದಿಗಳ ಮೇಲೆ ಅವಲಂಬಿತವಾಗಬೇಕಲ್ಲವೇ. ಆಗ ಜಿಲ್ಲಾಧಿಕಾರಿಯವರೇ ರಿಟರ್ನಿಂಗ್ ಆಫೀಸರ್ ಆಗಿರುತ್ತಾರೆ. ಅಸಿಸ್ಟೆಂಟ್ ಕಮೀಷನರ್‌ರವರು ಅಸಿಸ್ಟೆಂಟ್ ರಿಟರ್ನಿಂಗ್ ಆಫಿಸರ್‌ರಾಗಿರುತ್ತಾರೆ. ನಾವು ಅವರಿಗಾಗಿ ಹೊಸದಾಗಿ ಸಿಬ್ಬಂದಿಯನ್ನು ಸೃಷ್ಟಿ ಮಾಡುವುದಕ್ಕಾಗುವುದಿಲ್ಲ. ಇದು ಒಂದು ಸರಳವಾದ ಅಧ್ಯಧ್ಯಾಪನ ಪುನರ್ ವಿಮರ್ಶೆ ಮಾಡತಕ್ಕದ್ದು. ಎರಡನೆಯದಾಗಿ ಐಎಎಸ್ ಅಧಿಕಾರಿಗಳು ಲಭ್ಯತೆ ಇಲ್ಲದಿರುವುದರಿಂದ ಕೆಎಎಸ್‌ನಲ್ಲಿಯೂ ಕೂಡ

ಬಹಳ ಪ್ರತಿಭಾವಂತ, ಸಮರ್ಥರು ಇದ್ದಾರೆಂದು ತಾವೇ ಈ ಸದನದಲ್ಲಿ ಅನೇಕ ಸಂದರ್ಭಗಳಲ್ಲಿ ಪ್ರಕಟಣೆ ಮಾಡಿರುವುದರಿಂದ ಮೂರು ವರ್ಷಗಳ ಅವಧಿಗೆ ಪ್ರಾಯೋಗಿಕವಾಗಿ ನಮ್ಮ ಮುಖ್ಯಕಾರ್ಯನಿರ್ವಹಣಾಧಿಕಾರಿಯನ್ನಾಗಿ ಈ ಸೆಲೆಕ್ಷನ್ ಗ್ರೇಡ್ ಇರತಕ್ಕಂಥಹ ಕೆಎಎಸ್ ಅಧಿಕಾರಿಗಳನ್ನಾಗಲಿ, ಬಹಳ ಅನುಭವಿ ಇರುವಂತಹ ಅಭಿವೃದ್ಧಿ ಇಲಾಖೆಯಲ್ಲಿರುವಂತಹವರನ್ನು ನೇಮಕಾತಿ ತಮ್ಮ ಒಪ್ಪಿಗೆಯನ್ನು ಪಡೆಯುತ್ತಿದ್ದೇವೆ. ತಾವು ದಯವಿಟ್ಟು ಮೇಲ್ಮನೆಯಲ್ಲಿ ಈ ಒಪ್ಪಿಗೆ ಕೊಟ್ಟಿರುವಂತಹ ಈ ತಿದ್ದುಪಡಿಯನ್ನ ಈ ಸದನವೂ ಕೂಡ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕವಾಗಿ ವಿನಂತಿಮಾಡಿಕೊಳ್ಳುತ್ತಿದ್ದೇನೆ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕರವಾದ ರೂಪದಲ್ಲಿರುವ ''1998ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ''1998ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 6ರವರೆಗೆ

ಉಪಾಧ್ಯಕ್ಷರು: ''ಖಂಡ 2 ರಿಂದ 6ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

(ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ - 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ,

ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ''1998ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ''1998ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಜೆ.ಹೆಚ್.ಪಟೇಲ್(ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ನಾವು ಮೆಜಾರಿಟಿ ನಂಬರ್‌ನಲ್ಲಿ ಗೆದ್ದಿರುತ್ತೇವೆ. ಟಿಕ್ಕಿಕಲಿ ಅವರ ಪಾರ್ಟಿಯವರು ಯಾರೋ ಒಬ್ಬರು ಇರುತ್ತಾರೆ. ಆಗ ನಾವು ಏನು ಮಾಡಬೇಕು? ನಮ್ಮ ಅನುಕೂಲವನ್ನು ನಾವು ನೋಡಿಕೊಳ್ಳಬೇಕಲ್ಲಾ, ನಾವು ಅದನ್ನೇ ಮಾಡಿದ್ದೇವೆ.

3. ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯಗಳ ರಾಜ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ''1998ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವ ಮಂಡಿಸಲ್ಪಟ್ಟಿತು.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಈಗ 3